ಕಮರ್ಷಿಯಲ್ ಆಗಿಬಿಟ್ಟಿದೆ. ಒಂದು ಬೈಪಾಸ್ ರಸ್ತೆ ಇದೆ, ಅದು ಕೂಡ ತುಂಬಾ ಕಮರ್ಷಿಯಲ್ ಆಗಿಬಿಟ್ಟಿದೆ. ಅಲ್ಲಿ ಬಾರ್‌ಗಳು ಹೋಟಲ್‌ಗಳು ಮುಂತಾಗಿ ಆಗಿ ತುಂಬಾ ಕಮರ್ಷಿಯಲ್ ಆಗಿ ತೊಂದರೆಯುಂಟಾಗುತ್ತಿದೆ. ಕಡೇಪಕ್ಷ ಬೈಪಾಸ್ ರಸ್ತೆಗಳಲ್ಲಾದರೂ ಅವು ಕಮರ್ಷಿಯಲ್ ಆಗದಿದ್ದ ಹಾಗೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ತಾವು ಮಾನ ಸಚಿವರ ಹತ್ತಿರ ಹೋಗಿ ಚರ್ಚಿಸಿ.

11.20 ಪಿ.ಎಂ

ಶ್ರೀ ಕೆ.ವಿ. ಅನುಸೂಯಮ್ಮ ನಟರಾಜನ್ : ಮಾನ್ಯ ಅಧ್ಯಕ್ಷರೆ, ನನ್ನ ಎರಡನೇ ಪ್ರಶ್ನೆಗೂ ಸರಿಯಾದ ಉತ್ತರ ಗೊತ್ತಾಗುತ್ತಿಲ್ಲ, ಅವರು ಹೇಳಬೇಕು; ಯಾಕೆಂದರೆ ನಬಾರ್ಡ್ ಯೋಜನೆಯಡಿ ಅನೇಕ ರಸ್ತೆಗಳಾಗುತ್ತಿವೆ. ಹೆಣ್ಣುಮಕ್ಕಳಿಗೇನೋ ಸ್ವರ್ಣಜಯಂತಿ, ಸ್ತ್ರೀಶಕ್ತಿ ಯೋಜನೆಗಳಡಿ ಕೆಲಸಗಳು ಸಿಗುತ್ತಿವೆ. ಆದರೆ ಗಂಡುಮಕ್ಕಳು ನಿರುದ್ಯೋಗಿಗಳಾಗಿದ್ದಾರೆ ಆದ್ದರಿಂದ ಲಾರಿ, ಬುಲ್‌ಡೋಜರ್ ಡ್ರೈವರ್‌ಗಳ ಹುದ್ದೆ ತುಂಬೇಕೆಂದು ಸವಿನಯ ಪ್ರಾರ್ಥನೆ.

ಶ್ರೀ ಧರ್ಮಸಿಂಗ್ : ಶ್ರೀಮತಿ ಅನುಸೂಯಮ್ಮನವರು ಕೇಳುತ್ತಿದ್ದಾರೆ, ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ.

ಅಧ್ಯಕ್ಷರು : ನೀವು ಹೋಗಿ ಮಾನ್ಯ ಸಚಿವರ ಹತ್ತಿರ ಮಾತನಾಡಿ ಅವರು ಪರಿಶೀಲನೆ ಮಾಡುತ್ತಾರೆ.

ಚಿಕ್ಕಮಗಳೂರು ಜಿಲ್ಲೆ ಸಕ್ರೆಪಟ್ಟಣದಿಂದ ಬಾಣಾವರದವರೆಗೆ 22 ಕಿ.ಮಿ. ರಸ್ತೆಯನ್ನು ಅಗಲೀಕರಿಸುವುದು

126 (1464) ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆ ಸಕ್ರೆಪಟ್ಟಣದಿಂದ ಬಾಣಾವರ ಗಡಿಯವರೆಗಿನ 22 ಕಿ.ಮೀ. ಲೋಕೋಪಯೋಗಿ ರಸ್ತೆ ತೀವ್ರ ಕಿರಿದಾಗಿದ್ದು, ಸಾರ್ವಜನಿಕರ ಹಾಗೂ ವಾಹನಗಳು ಓಡಾಡಲು ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈ ರಸ್ತೆಯನ್ನು ಅಗಲೀಕರಿಸಿ (ವೈಡನಿಂಗ್) ದುರಸ್ತಿಗೊಳಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ; ಈ ಬಗ್ಗೆ (ಅಧಿಕಾರಿಗಳಿಂದ) ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆಯೇ; ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಈ ರಸ್ತೆಯ ಕೆಲವು ಭಾಗಗಳು ತೀವ್ರ ಕಿರಿದಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ನನ್ನ ಎರಡನೇ ಪ್ರಶ್ನೆಗೂ ಮಾನ್ಯ ಸಚಿವರು ಮೊದಲಿನಂತೆ ಅಷ್ಟೇ ಸ್ಪಷ್ಟವಾದ ಉತ್ತರವನ್ನು ಹೇಳಿದ್ದಿದ್ದರೆ ನನಗೆ ಸಮಾಧಾನವಾಗುತ್ತಿತ್ತು; ಆದರೆ ಪರಿಶೀಲನೆ ಮಾಡುತ್ತೇವೆಂದಿದ್ದಾರೆ, ಯಾವಾಗ ಪರಿಶೀಲನೆ ಮಾಡುತ್ತಾರೆ? ಅಲ್ಲಿ ಬಹಳಷ್ಟು ಅಪಘಾತಗಳಾಗುತ್ತಿವೆ. ಬಾಣಾವರ ಮತ್ತು ಸಖರಾಯಪಟ್ಟಣಕ್ಕೆ ಇದು ಲಿಂಕ್ ರಸ್ತೆ. ಇಲ್ಲಿ ವಾಹನಗಳ ಒತ್ತಡ ಬಹಳ ಇದೆ. ಇದನ್ನು ಯಾವಾಗ ಮಾಡುತ್ತಾರೆಂದು ಹೇಳಿದರೆ ನನ್ನ ಕ್ಷೇತ್ರಕ್ಕೆ ಬಹಳ ಅನುಕೂಲವಾಗುತ್ತದೆ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) ಅವರು ಹೇಳಿರುವ ರಸ್ತೆಯ ಅಗಲ ಕಡಿಮೆ ಇದೆ ನಿಜ, ಅದನ್ನು ಅಗಲೀಕರಣ ಮಾಡುವ ಪ್ರಸ್ತಾವ ಸರ್ಕಾರದ ಗಮನದಲ್ಲಿದೆ. ಇನ್ನು ಮೇಂಟೆನ್ಸಿಲ್ಲ ಎಂದಿದ್ದಾರೆ; ಮೊನ್ನೆ ಪರಿಶೀಲನೆ ಸಭೆ ಮಾಡಿದಾಗ ಮಾನ್ಯ ಚಂದ್ರೇಗೌಡರ ಜೊತೆ ನೀವೂ ಇದ್ದೀರಿ. ರಾಜ್ಯ ಹೆದ್ದಾರಿಗಳ ದುರಸ್ತಿ ಮಾಡುವ ಪಟ್ಟಿಯಲ್ಲಿ ತಮ್ಮದೂ ಸೇರಿದೆ. ಈಗಾಗಲೇ ದುರಸ್ತಿಗಾಗಿಯೇ ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಾಗಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ಮೊನ್ನೆ ಚಿಕ್ಕಮಗಳೂರಿಗೆ ಮಾನ್ಯ ಸಚಿವರು ಒಂದು ಕೆಲವು ಗ್ರಾಂಟ್ಸ್ ಕೊಟ್ಟಿದ್ದಕ್ಕೆ ಅವರಿಗೆ ನಾನು ಧನ್ಯವಾದ ಹೇಳುತ್ತೇನೆ; ಇದು ತಕ್ಷಣ ಆಗಬೇಕಾಗಿದೆ, ಮಳೆಗಾಲದಲ್ಲಿ ತೀರ ಕೊರಕಲು ಬಿದ್ದು ಯಾವುದೇ ವಾಹನ ಓಡಾಡಲು ಆಗುತ್ತಿಲ್ಲ; ಅದು ಕೇವಲ 8 ಅಡಿ ಅಗಲದ ರಸ್ತೆ, ಅದರ ಎರಡೂ ಬದಿ ಒಂದೊಂದು ಮೀಟರ್ ಅಗಲೀಕರಣ ಮಾಡಲು 2001-2002ರ ಅನುದಾನದಲ್ಲಿ ಅದನ್ನು ಸೇರಿಸಿಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ : ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ

ಅಧ್ಯಕ್ಷರು : ಮಾನ್ಯ ಸೋಮಣ್ಣನವರೆ, ನಿಮ್ಮ ಪ್ರಶ್ನೆಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆ. ಇನ್ನು ಮುಂದಿನ ಪ್ರಶ್ನೆ ಶ್ರೀ ಉಮೇಶ್‌ಕತ್ತಿ-ಆಬ್ಸೆಂಟ್, ಶ್ರೀ ಎಚ್.ಎಂ. ಚಂದ್ರಶೇಖರಪ್ಪ - ಆಬ್ಸೆಂಟ್, ಶ್ರೀ ಪ್ರಕಾಶ್ ಖಂಡ್ರೆ - ಆಬ್ಸೆಂಟ್.

ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ನಬಾರ್ಡ್ ಆರ್ಥಿಕ ನೆರವಿನಡಿಯಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳು.

131 (1169) ಶ್ರೀ ಶಿವಪ್ಪ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಬಾರ್ಡ್ ಆರ್ಥಿಕ ನೆರವಿನಡಿ ಯಲ್ಲಿ ಪ್ರಸ್ತುತ ಸಾಲಿನಲ್ಲಿ ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ ಕೈಗೊಂಡಿರುವ ರಸ್ತೆ ಕಾಮಗಾರಿಗಳೆಷ್ಟು?

ಆ) ಈಗಾಗಲೇ ಎಷ್ಟು ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ?

ಇ) ಈವರೆಗೆ ಪೂರ್ಣಗೊಂಡಿರುವ ಕಾಮಗಾರಿಗಳೆಷ್ಟು; ಅವು ಯಾವುವು?